# ಡಾ. ಶಾಲಿನಿ ರಜನೀಶ್ ಭಾ.ಆ.ಸೇ – ಕಿರು ಪರಿಚಯ

ಡಾ.ಶಾಲಿನಿ ರಜನೀಶ್ ರವರು 1989 ರಲ್ಲಿ ತಮ್ಮ 22 ನೇ ವಯಸ್ಸಿನಲ್ಲಿ ಮಹಿಳಾ ಐ.ಎ.ಎಸ್ ಟಾಪರ್ ಆಗಿ ಭಾರತೀಯ ಆಡಳಿತ ಸೇವೆಗೆ (IAS) ಸೇರಿದರು. ಅವರು ಬಿಎ ಯಲ್ಲಿ ಚಿನ್ನದ ಪದಕ ವಿಜೇತರು ಮತ್ತು ಪಂಜಾಬ್ ವಿಶ್ವವಿದ್ಯಾಲಯದಿಂದ ಎಂ.ಎ ಸೈಕಾಲಜಿ ಪದವಿ ಪಡೆದಿದ್ದಾರೆ. ಭಾರತೀಯ ಆಡಳಿತ ಸೇವೆಗೆ ಸೇರಿದ ನಂತರ, ಪಿಎಚ್‌ಡಿ ಅಧ್ಯಯನ ಕೈಗೊಂಡರು. ಮಂಗಳೂರು ವಿಶ್ವವಿದ್ಯಾನಿಲಯದಿಂದ ಗ್ರಾಮೀಣ ಅಭಿವೃದ್ಧಿಯಲ್ಲಿ (2000) ಮತ್ತು ಆಸ್ಟ್ರೇಲಿಯಾದ ಲ್ಯಾಟ್ರೋಬ್ ವಿಶ್ವವಿದ್ಯಾಲಯದಿಂದ ಎಂಬಿಎ (2001) ಪಡೆದಿದ್ದಾರೆ. ಮಹಿಳಾ ಸಬಲೀಕರಣ, ಸಾರ್ವಜನಿಕ ಆಡಳಿತ ಮತ್ತು ಮಹಿಳಾ ಕಲ್ಯಾಣಕ್ಕಾಗಿ ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಅವರ ಸಾಧನೆಗಳು ಮತ್ತು ಕೊಡುಗೆಗಳನ್ನು ಪರಿಗಣಿಸಿ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯವು 2013 ರಲ್ಲಿ ಸಾಹಿತ್ಯ ಡಾಕ್ಟರೇಟ್ ನೀಡಿ ಗೌರವಿಸಿದೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಅವರು ಅನೇಕ ಪ್ರಬಂಧಗಳನ್ನು ಪ್ರಸ್ತುತಪಡಿಸಿದ್ದಾರೆ. ಅವರು ಈವರೆಗೂ 13 ಪುಸ್ತಕಗಳನ್ನು ಬರೆದಿದ್ದು, 8 ಇಂಗ್ಲಿಷ್‌ನಲ್ಲಿ ಮತ್ತು 5 ಕನ್ನಡದಲ್ಲಿ ಇವೆ. ನಿರ್ವಹಣೆ, ವ್ಯಕ್ತಿತ್ವ ವಿಕಸನ, ಮಹಿಳಾ ಸಬಲೀಕರಣ, ಐಎಎಸ್ ತರಬೇತಿ, ಸ್ಮಾರ್ಟ್ ಸಿಟಿ, ಕೋವಿಡ್-19 ಬಗ್ಗೆ ಜನಜಾಗೃತಿ ಮತ್ತು ಅರಿವು, ಯುವಜನತೆಗೆ ಭವಿಷ್ಯವನ್ನು ರೂಪಿಸಿಕೊಳ್ಳುವ ವಿಷಯಗಳನ್ನು ಒಳಗೊಂಡಂತೆ ಅವರು ನಿಯಮಿತವಾಗಿ ಲೇಖನ ಬರೆಯುತ್ತಾರೆ ಮತ್ತು ದೊಡ್ಡ ಮಟ್ಟದಲ್ಲಿ ಸಂಪರ್ಕ ಕಲ್ಪಿಸಲು ದೂರದರ್ಶನ, ರೇಡಿಯೋ, ಸೆಮಿನಾರ್‌ಗಳಲ್ಲಿ ಉಪನ್ಯಾಸ/ಸಂದರ್ಶನಗಳನ್ನು ನೀಡುತ್ತಾರೆ.

ಅವರು ಭಾರತ ಸರ್ಕಾರದಲ್ಲಿ ಹಣಕಾಸು, ನಾಗರಿಕ ವಿಮಾನಯಾನ, ಹಡಗು, ಕೃಷಿ ಮತ್ತು ರಸ್ತೆ ಸಾರಿಗೆ ಸಚಿವಾಲಯಗಳಲ್ಲಿ ಅನೇಕ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯಾಗಿ, ಅವರು ಕ್ರಾಂತಿಕಾರಿ ಶಾಸನವನ್ನು ಮುನ್ನಡೆಸಿದರು. ಅಂದರೆ ಕರ್ನಾಟಕದ ನಾಗರೀಕರ ಸೇವೆಗಳ ಖಾತರಿ ಕಾಯಿದೆ, 2011 ಅನ್ನು ಜನಪ್ರಿಯವಾಗಿ "ಸಕಾಲ" ಎಂದು ಕರೆಯಲಾಗುತ್ತದೆ. ಈ ಅನನ್ಯ ಕಾಯಿದೆಯು ಸರ್ಕಾರಿ ನೌಕರರು ನಾಗರೀಕರಿಗೆ 1122 ಸೇವೆಗಳನ್ನು ನೀಡುವುದನ್ನು ಖಾತ್ರಿಪಡಿಸುತ್ತದೆ; ಈ ಸೇವೆಯು 101 ಇಲಾಖೆಗಳನ್ನು ಒಳಗೊಂಡಿದ್ದು, ನಿಗದಿತ ಸಮಯದೊಳಗೆ ಸೇವೆ ನೀಡಲು ವಿಫಲವಾದರೆ ನಾಗರೀಕರಿಗೆ ಪಾವತಿಸಬೇಕಾದ ಪರಿಹಾರದ ವೆಚ್ಚವನ್ನು ಅವರ ಸಂಬಳದಿಂದ ಕಡಿತಗೊಳಿಸಲಾಗುವುದು, ಜೊತೆಗೆ 7ಕ್ಕೂ ಹೆಚ್ಚು ಉದ್ದೇಶಪೂರ್ವಕವಾಗಿ ಕರ್ತವ್ಯಲೋಪ ಎಸಗಿದರೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ. ಇದರಿಂದ, ಲಕ್ಷಾಂತರ ನಾಗರೀಕರು ಈ ಸಮಯಬದ್ಧ ಸೇವೆಗಳನ್ನು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ. "ಸಕಾಲ" ಯೋಜನೆಗೆ ಪ್ರಧಾನ ಮಂತ್ರಿ ಪ್ರಶಸ್ತಿ, ಗೂಗಲ್ ಇನ್ನೋವೇಶನ್ ಅವಾರ್ಡ್, ನ್ಯಾಷನಲ್ ಇ-ಗವರ್ನೆನ್ಸ್ ಅವಾರ್ಡ್, "ಸಿಟಿಜನ್ ಸೆಂಟ್ರಿಕ್ ಸರ್ವಿಸ್ ಡೆಲಿವರಿ" ನಲ್ಲಿ 2013-14 ಮತ್ತು ಕ್ವಾಲಿಟಿ ಸರ್ಕಲ್ ಆಫ್ ಇಂಡಿಯಾ ರಾಷ್ಟ್ರೀಯ ಪ್ರಶಸ್ತಿ -2014, ಕಾಮನ್ವೆಲ್ತ್ ಸಾರ್ವಜನಿಕ ಆಡಳಿತ ಮತ್ತು ನಿರ್ವಹಣೆ (2014 ರಲ್ಲಿ CAPAM) ಪ್ರಶಸ್ತಿಗಳು ದೊರೆತಿವೆ. ಅವರು ದೇಶದಲ್ಲಿ ಮೊದಲ ಬಾರಿಗೆ 2 ತಿಂಗಳ ದಾಖಲೆಯ ಸಮಯದಲ್ಲಿ ಸಕಾಲ ಸೇವೆಗೆ ISO 9001 ಪ್ರಮಾಣಪತ್ರವನ್ನು ಪಡೆದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ, ಸಮಗ್ರ ರಾಜ್ಯ ಆರೋಗ್ಯ ನೀತಿ ಮತ್ತು ಕೆಪಿಎಂಇ ಕಾಯ್ದೆ 2007 ರ ತಿದ್ದುಪಡಿಯನ್ನು ರೂಪಿಸುವಲ್ಲಿ ಅವರು ಸಕ್ರಿಯ ಪಾತ್ರ ವಹಿಸಿದ್ದಾರೆ. ಇ-ಆಸ್ಪತ್ರೆ, ಸಾರ್ವತ್ರಿಕ ಆರೋಗ್ಯ ರಕ್ಷಣೆ ಯೋಜನೆ ಮತ್ತು ಇತ್ಯಾದಿಗಳನ್ನು ರೂಪಿಸುವಲ್ಲಿ ಪೂರ್ವಭಾವಿ ಪಾತ್ರವನ್ನು ವಹಿಸಿದ್ದಾರೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ, ಕಲಿಕೆಯನ್ನು ಹೆಚ್ಚು ಗುಣಾತ್ಮಕ, ಸಂತೋಷದಾಯಕ, ಆಸಕ್ತಿದಾಯಕ ಮತ್ತು ಲಾಭದಾಯಕವಾಗಿಸಲು ಅವರು ಬ್ಯಾಗ್‌ಲೆಸ್(Bagless) ದಿನಗಳನ್ನು ಪರಿಚಯಿಸಿದರು. ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ 42 ಖಾಸಗಿ ಕಂಪನಿಗಳಿಂದ ಸಿಎಸ್‌ಆರ್ ಹಣವನ್ನು ತರುವಲ್ಲಿ ಯಶಸ್ವಿಯಾದರು

ಪ್ರಸ್ತುತ, ಡಾ. ಶಾಲಿನಿ ರಜನೀಶ್‌ರವರು ಯೋಜನಾ ಮತ್ತು ಸಾಂಖ್ಯಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಯೋಜನಾ ಇಲಾಖೆಯಲ್ಲಿ, ಯುಎನ್‌ಡಿಪಿಯ ಸಹಯೋಗದೊಂದಿಗೆ ಸುಸ್ಥಿರ ಅಭಿವೃದ್ಧಿ ಗುರಿ ಸಮನ್ವಯ ಕೇಂದ್ರವನ್ನು ಸ್ಥಾಪಿಸಿ, ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ. ಪ್ರಸ್ತುತ, ಕರ್ನಾಟಕ ರಾಜ್ಯವು ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯಲ್ಲಿ ದೇಶದಲ್ಲಿಯೇ 3ನೇ ಸ್ಥಾನದಲ್ಲಿದೆ. ರಾಜ್ಯವನ್ನು ಮೊದಲನೇ ಸ್ಥಾನಕ್ಕೆ ತರುವ ಪ್ರಯತ್ನದಲ್ಲಿ ಅವಿರತವಾಗಿ ಶ್ರಮವಹಿಸುತ್ತಿದ್ದಾರೆ.

ಅವರು ಯೋಜನಾ ಮತ್ತು ಸಾಂಖ್ಯಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. UNDP ಮತ್ತು NITI ಆಯೋಗ್ ಸಹಯೋಗದೊಂದಿಗೆ ಸುಸ್ಥಿರ ಅಭಿವೃದ್ಧಿ ಗುರಿಗಳ ಮೇಲೆ ಕೆಲಸ ಮಾಡುವುದು. ಪ್ರಸ್ತುತ ಅವರು ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರಾಗಿ, ಇಲಾಖೆಯ ಉಸ್ತುವಾರಿ ವಹಿಸಿದ್ದಾರೆ.

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು www.shaliniias.org ಗೆ ಭೇಟಿ ನೀಡಿ.